Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 102/2017

ಪ್ರಾ.ಸಾ. 3 ಚಾ.ಸಾ. 4

| | | |
|---|---|---|
| ಹೆಸರು | : | ಶಂಕ್ರಮ್ಮ |
| ಗಂಡನ ಹೆಸರು | : | ರಾಜಪ್ಪ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸ | : | ಬಳಿಚಕ್ರ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 17-01-2024**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ಚಾಸಾ-1 ಮರೆಮ್ಮ ನನ್ನ ಸೊಸೆಯಾಗಬೇಕು. ನಾವು ಮಾದಿಗ ಜಾತಿಗೆ ಸೇರಿದವರು. ಆರೋಪಿತರು ಗೊತ್ತು. ಆರೋಪಿತರು ಕಬ್ಬಲಿಗ ಜಾತಿಗೆ ಸೇರಿದವರು. ಈಗ್ಗೆ 6-7 ವರ್ಷಗಳ ಹಿಂದೆ ನಾನು ಮತ್ತು ಚಾಸಾ-1 ನನ್ನ ಸೊಸೆ ಮಧ್ಯಾಹ್ನ 12-00 ಗಂಟೆಗೆ ಬಳಿಚಕ್ರ ಗ್ರಾಮದ ನಮ್ಮ ಹೊಲದಲ್ಲಿದ್ದಾಗ ಆರೋಪಿತರು ಬಂದು ನಮ್ಮನ್ನು ಉದ್ದೇಶಿಸಿ ಮಾದಿಗ ಸೂಳೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂಧನೆ ಮಾಡಿದರು. ಮೊದಲು ನನ್ನ ಸೊಸೆಯಾದ ಮರೆಮ್ಮಳಿಗೆ ಎಳೆದಾಡಿ ಆರೋಪಿತರು ಹೊಡೆದಿರುತ್ತಾರೆ ಇವರನ್ನು ಹೊಡೆದು ಬಿಸಾಕಿ ಎಂದಿರುತ್ತಾರೆ. ಅದರಿಂದ ನನಗೆ ಈಗ ಆರೋಗ್ಯದಲ್ಲಿ ತೊಂದರೆಯಾಗಿದ್ದು ಹೇಳಲು ಸಹ ಆಗುವುದಿಲ್ಲ. ನಾವು ಯಾವ ಜಾತಿಗೆ ಸೇರಿದವರು ಎಂದು ಆರೋಪಿತರಿಗೆ ಗೊತ್ತಿತ್ತು. ನಮಗೆ ಬಾಯಿಗೆ ಬಂದಂತೆ ಬೈದರು. ಆ ಪದಗಳನ್ನು ಹೇಳಲು ಆಗುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರೆ ನಮಗೆ ಹೊಡೆದಿರುತ್ತಾರೆ. ಇಷ್ಟನ್ನು ಹೊರತುಪಡಿಸಿ ಬೇರೆ ಏನೂ ಗೊತ್ತಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು

ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ

2. ದಿನಾಂಕಃ 11-03-2015 ರಂದು ಮಧ್ಯಾಹ್ನ 12-00 ಗಂಟೆಗೆ ನಾನು ನನ್ನ ಸೊಸೆ ಮರೆಮ್ಮ ಅವರ ಸಂಬಂಧಿ ಬಸಮ್ಮ ಬಳಿಚಕ್ರ ಗ್ರಾಮದ ಸರ್ವೆ ನಂ. 171/2 ರಲ್ಲಿದ್ದಾಗ ಆರೋಪಿತರು ಅತಿಕ್ರಮ ಪ್ರವೇಶ ಮಾಡಿ ನನ್ನನ್ನು ಮತ್ತು ನನ್ನ ಸೊಸೆಯನ್ನು ಉದ್ದೇಶಿಸಿ ಎಲೇ ಬೋಸಡಿ ಸೂಳೇ ಮಕ್ಕಳೆ, ಮಾದಿಗ ಸೂಳೇ ಮಕ್ಕಳೆ ಈ ಹೊಲದಲ್ಲಿ ಯಾಕೆ ಬಂದು ಕುಳಿತುಕೊಂಡಿದ್ದಿರಿ ಎಂದು ಜಾತಿ ಎತ್ತಿ ಬೈದು ಆರೋಪಿ ನರಸಿಂಗ ನನ್ನ ಸೊಸೆ ಎಡಗೈ ಹಿಡಿದು ದರದರನೆ ಎಳೆಯುತ್ತಿದ್ದು ನಾನು ಬಿಡಿಸಲು ಹೋದಾಗ ಆರೋಪಿ ಈಶಪ್ಪ ಕೈಯಿಂದ ನನ್ನ ಎಡ ಭುಜದ ಮೇಲೆ ಹೊಡೆದ ಎಂದರೆ ಸರಿ. ಮಲ್ಲಿಕಾರ್ಜುನ ಹೊಡೆಯಿರಿ ಈ ಸೂಳೆಯರಿಗೆ ಬಹಳ ಸೊಕ್ಕು ಬಂದಿದ್ದೆ ಈ ಮಾದಿಗ ಸೂಳೆಯರಿಗೆ ಜೀವ ಸಹಿತ ಹೊಡೆಯಿರಿ ಎಂದು ಹೇಳಿದ್ದು ಈಶಪ್ಪ ನನ್ನ ಸೊಸೆಗೆ ಏ ಬೋಸಡಿ ಸೂಳೆ ಎಂದು ಬೈಯುತ್ತಾ ಕೈಯಿಂದ ನನ್ನ ಬಲ ಭುಜದ ಕೆಳಗೆ, ಬೆನ್ನಿಗೆ ಹೊಡೆದ ಎಂದರೆ ಸರಿ. ಆಗ ಬಸಮ್ಮ ಮತ್ತು ಸಾಬಮ್ಮ ಜಗಳ ಬಿಡಿಸಿದರು ಎಂದರೆ ಸರಿ. ಆರೋಪಿತರು ಹೋಗುವಾಗ ಈ ಸಲ ಉಳಿದುಕೊಂಡಿರಿ ಇಲ್ಲ ಅಂದರೆ ನಿಮ್ಮನ್ನು ಖಲಾಸ ಮಾಡುತ್ತಿದ್ದೇವು ಅಂದರು ಎಂದರೆ ಸರಿ. ಈ ಬಗ್ಗೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿ. ಬಹಳ ದಿನಗಳಾಗಿದ್ದರಿಂದ ಮರೆತ್ತಿದ್ದೇನೆ ಎಂದರೆ ಸರಿ. ಮು.ಮಾ.1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಬಿ.ಪಾಟೀಲ ವಕೀಲರಿಂದ

3. ಒಂದು ಜಮೀನು 6 ಎಕರೆ 20 ಗುಂಟೆ ಮತ್ತೊಂದು ಜಮೀನು 12 ಎಕರೆ ಇದೆ. ಈ ಜಗಳ 2 ನೇ ಆರೋಪಿ ತೆಗೆದುಕೊಂಡಿದ್ದ ಹೊಲದಲ್ಲಿಯೇ ಆಯಿತು. 6 ಎಕರೆ 20 ಗುಂಟೆ ಜಮೀನು ಭೀಮರಾಯನ ಹೊಲ ಎಂದರೆ ಸರಿಯಲ್ಲ. ಸದರಿ ಭೀಮರಾಯ 18-12-2015 ರಂದು ಆ ಜಮೀನನ್ನು 2 ನೇ ಆರೋಪಿಗೆ ಖರೀದಿಗೆ ಕೊಟ್ಟಿದ್ದಾರೆ ಎಂದರೆ ನಮ್ಮನ್ನು ಕೇಳಿಲ್ಲ. 2 ನೇ ಆರೋಪಿ ಜಮೀನನ್ನು ಕೊಂಡುಕೊಂಡ ನಂತರ ಆ ಜಮೀನು ಆತನ ಹೆಸರಿನಲ್ಲಿ ವರ್ಗಾವಣೆಯಾಗಿದ್ದು ಆತನೆ ಮಾಲೀಕ ಎಂದರೆ ಸರಿಯಲ್ಲ. ಸದರಿ ಜಮೀನಿಗಾಗಲಿ ನನಗಾಲಿ, ನನ್ನ ಮಗ, ಸೊಸೆಗಾಗಲಿ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಭೀಮರಾಯ ಸದರಿ ಜಮೀನನ್ನು 2 ನೇ ಆರೋಪಿಗೆ ಕಬ್ಜರಹಿತ ಸ್ವಾದೀನಕ್ಕೆ 1,50,000/- ರೂಪಾಯಿಗಳಿಗೆ ಬೋಗಕ್ಕೆ ಹಾಕಿದ್ದಾರೆ ಎಂದರೆ ಸರಿಯಲ್ಲ. ಆ ಹಣವನ್ನು ನನ್ನ ಮಗ ತೆಗೆದುಕೊಳ್ಳಲು ಒಪ್ಪದೆ ಇದುದ್ದರಿಂದ ಬೋಗ್ಯ ವಾಪಾಸಕ್ಕೆ ನ್ಯಾಯಾಲಯಕ್ಕೆ ಕೇಸು ಹಾಕಿದ್ದ ಎಂದರೆ ಸರಿಯಲ್ಲ. ಆ ಜಮೀನು ನನ್ನದು. ಆ ಕೇಸು ನ್ಯಾಯಾಲಯದಲ್ಲಿ ಭೀಮರಾಯನಂತೆ ಆಯಿತು ಎಂದರೆ ಸರಿಯಲ್ಲ. ನನ್ನ ಮಗ ಮಲ್ಲಪ್ಪ ಭೀಮರಾಯ 3 ಎಕರೆ 21 ಗುಂಟೆ ಜಮೀನನ್ನು ತನ್ನ ಹೆಸರಿಗೆ ಖರೀದಿ ಕರಾರು ಪತ್ರ ಮಾಡಿಕೊಟ್ಟಿದ್ದಾನೆ

ಎಂದು ಕೇಸು ಹಾಕಿದ್ದ ಎಂದರೆ ಸಾಕ್ಷಿ ಯಾರನ್ನು ಕೇಳಿ ಬರೆದುಕೊಟ್ಟನು ಎಂದು ಹೇಳುತ್ತಾರೆ. ಆ ಕೇಸು ವಜಾ ಆಯಿತು ಎಂದರೆ ಸರಿಯಲ್ಲ.

4. ಆ ಜಮೀನಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಮತ್ತು ನಾವು ಬೆಳೆ ಕಾಯಲು ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ್ಗೆ 6-7 ವರ್ಷಗಳ ಹಿಂದೆ ನಾನು ಮತ್ತು ಚಾಸಾ-1 ನನ್ನ ಸೊಸೆ ಮಧ್ಯಾಹ್ನ 12-00 ಗಂಟೆಗೆ ಬಳಿಚಕ್ರ ಗ್ರಾಮದ ನಮ್ಮ ಹೊಲದಲ್ಲಿದ್ದಾಗ ಆರೋಪಿತರು ಬಂದು ನಮ್ಮನ್ನು ಉದ್ದೇಶಿಸಿ ಮಾದಿಗ ಸೂಳೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂಧನೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲು ನನ್ನ ಸೊಸೆಯಾದ ಮರೆಮ್ಮಳಿಗೆ ಎಳೆದಾಡಿ ಆರೋಪಿತರು ಹೊಡೆದಿರುತ್ತಾರೆ ಇವರನ್ನು ಹೊಡೆದು ಬಿಸಾಕಿ ಎಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಿಂದ ನನಗೆ ಈಗ ಆರೋಗ್ಯದಲ್ಲಿ ತೊಂದರೆಯಾಗಿದ್ದು ಹೇಳಲು ಸಹ ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವ ಜಾತಿಗೆ ಸೇರಿದವರು ಎಂದು ಆರೋಪಿತರಿಗೆ ಗೊತ್ತಿತ್ತು. ನಮಗೆ ಬಾಯಿಗೆ ಬಂದಂತೆ ಬೈದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಶಪ್ಪ ಜಮೀನನ್ನು ಕೊಂಡುಕೊಂಡಿದ್ದರಿಂದ ಆತನ ವಿರುದ್ಧ ಹೊಟ್ಟೆ ಕಿಚ್ಚಿನಿಂದ ಸುಳ್ಳು ಕೇಸ ಹಾಕಿದ್ದೇನೆ ಎಂದರೆ ಸರಿಯಲ್ಲ. ಈಶಪ್ಪ ಜಮೀನನ್ನು ಕೊಂಡುಕೊಂಡ ನಂತರ 16-10-2016 ರಂದು ಗಿಡ ಕತ್ತರಿಸಿದ್ದೆವು ಎಂದು 7 ಜನರ ವಿರುದ್ಧ ಕೇಸು ಹಾಕಿದ್ದರು ಎಂದರೆ ಸರಿ. ಅದಲ್ಲದೆ ನನ್ನ ಮತ್ತು ನನ್ನ ಮಗನ ವಿರುದ್ಧ ಮತ್ತೊಂದು ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ. 2 ನೇ ಆರೋಪಿ ಜಮೀನನ್ನು ಕೊಂಡುಕೊಂಡ ನಂತರ 1 ವರ್ಷ 2 ತಿಂಗಳ ನಂತರ ಈ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಜಾತಿ ನಿಂಧನೆ ಪ್ರಕರಣ ದಾಖಲಿಸಿದರೆ ಹಣ ಸಿಗುತ್ತದೆ ಎಂದು ಈ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಮಗೆ ಆರೋಪಿತರು ಬೈದಿಲ್ಲ, ಹೊಡೆದಿಲ್ಲ, ಜಾತಿ ನಿಂಧನೆ ಮಾಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.